ಅಧ್ಯಕ್ಷರು: ಅದನ್ನೂ ಕೂಡ ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ 1986ನೇ ಸಾಲಿನಲ್ಲಿ ಏನೊಂದು ಸುತ್ತೋಲೆ ಹೊರಡಿಸಿದ್ದೀರಿ ಅದರ ಬಗ್ಗೆ ಒಂದು ಸ್ಪಷ್ಟವಾದ ವಿಚಾರವನ್ನು ಕೊಡತಕ್ಕಂಥದ್ದು.

ಅಧ್ಯಕ್ಷರು: ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳೊಂದಿಗೆ ಚರ್ಚಿಸಿ ಏತಕ್ಕೆ ಇದು ಅನುಷ್ಠಾನಗೊಂಡಿಲ್ಲ, ಅದರಲ್ಲಿ ನ್ಯೂನತೆಗಳು ಏನು ಇವೆ ಅದನ್ನು ಸರಿದೂಗಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡುತ್ತಾರೆಂದು ಹೇಳಿದ್ದಾರೆ. ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಜುಲ್ಫಿಕರ್ ಹಶ್ಮಿ: ಸರ್, ನನ್ನದೊಂದು ಅಹವಾಲು ಇದೆ.

ಅಧ್ಯಕ್ಷರು: ಹಶ್ಮಿಯವರೇ, ಇದು ಪ್ರಶ್ನೋತ್ತರ ವೇಳೆಯಲ್ಲ, ಇದು ಶೂನ್ಯ ವೇಳೆ, ಬೆಳಿಗ್ಗೆ ಕೆಲವರು ಕೆಲವೊಂದು ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೇಳಿದ್ದಾರೆ. ಅವರಿಗೆ ಅವಕಾಶ ನೀಡುತ್ತಿದ್ದೇನೆ. ನೀವು ಮಾತನಾಡಬೇಕಾದರೆ ಲಿಖಿತ ಮೂಲಕ ಕೇಳಿ. ಅದನ್ನು ಬಿಟ್ಟು ನೇರವಾಗಿ ಅಲ್ಲಿ ಎದ್ದು ನಿಂತು ಮಾತನಾಡುವುದು ಅಲ್ಲ. ಅದಕ್ಕೆ ಪ್ರೊಸೀಜರ್ ಇದೆ. ದಯಮಾಡಿ ಮೊದಲು ಅದನ್ನು ಕಲಿತುಕೊಳ್ಳಿ.

ಶ್ರೀ ಜಿ.ವಿ. ಶಿವಪ್ಪ: ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟರು ಅದು ಸರಿಯಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೂ ಇದು ಗೊತ್ತಿದೆ. ಅಧಿಕಾರಿಗಳ ಸಂಕಟವನ್ನು ನಾವು ಅರ್ಥ ಮಾಡುಕೊಳ್ಳಬೇಕು. ಅಧಿಕಾರಿಗಳು ಏನು ಹೇಳುತ್ತಾರೆ. ಅಂದರೆ ನಾವು ಯಾರ ಮಾತು ಕೇಳಬೇಕೆಂದು ತೀರ್ಮಾನವಾಗಲಿಲ್ಲ ಎಂದು. ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಹೇಳುತ್ತಾರೆ ಜಿಲ್ಲಾಪರಿಷತ್ತು ಏನು ಹೇಳುತ್ತದೆ ಅಷ್ಟು ಮಾತ್ರ ನಾನು ಕೇಳುತ್ತೇನೆಂದು ಹೇಳುತ್ತಾರೆ.

ಅಧ್ಯಕ್ಷರು:- 1986 ರಲ್ಲಿ ವ್ಯವಸ್ಥೆ ಇರಲಿಲ್ಲ, ಈಗ ಈ ವ್ಯವಸ್ಥೆ ಬಂದಿದೆ. ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಅಧಿಕಾರಿಗಳಿಗೆ ಹೇಳತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಆ ವಿಚಾರದಲ್ಲಿ ಚರ್ಚೆ ಬೇಕಾಗಿಲ್ಲ, ದಯವಿಟ್ಟು ಎಲ್ಲರೂ ಸಹಕರಿಸಿ.

(ಊ) ದೇವನಹಳ್ಳಿಯಲ್ಲಿ ಆಗತಕ್ಕ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಗ್ಗೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಇವತ್ತಿನ ಪತ್ರಿಕೆಯಲ್ಲಿ ನೋಡಿದೆ, ಮತ್ತು ಪತ್ರಿಕಾ ಘೋಷ್ಠಿಯಲ್ಲೂ ಕೂಡ ಈ ವಿಷಯ ಪ್ರಸ್ತಾಪವಾಗಿದೆ. ಮಾನ್ಯ ಸಿ.ಎಂ. ಇಬ್ರಾಹಿಂ ಅವರು ಹೇಳಿದ್ದಾರೆ, ದೇವನ ಹಳ್ಳಿಯಲ್ಲಿ ಆಗತಕ್ಕ ಇಂಟರ್ ನ್ಯಾಷನಲ್ ಏರ್ ಪೋರ್ಟ್‌ನ್ನು ಬಿ.ಒ.ಒ.ಟಿ. ಯೋಜನೆಯ ಅಡಿಯಲ್ಲಿ ಮಾಡುವುದಕ್ಕೆ ಒಂದು ವೇಳೆ ಟಾಟಾ ಕಂಪನಿಯವರು ಒಪ್ಪದೆ ಹೋದಾಗ ಏರ್‌ಪಾರ್ಟ್ ಅಥಾರಿಟಿ ಆಫ್ ಇಂಡಿಯಾ ಅವರೆ ಈ ಕೆಲಸ ಪ್ರಾರಂಭ ಮಾಡುತ್ತಾರೆ ಎಂಬ ಮಾತನ್ನು ಅವರು ಹೇಳಿದ್ದಾರೆ. ದೇವನಹಳ್ಳಿಯಲ್ಲಿ ಈ ಏರ್‌ಪೋರ್ಟ್ ಬಂದೇ ಬರುತ್ತದೆ, ಇದಕ್ಕೆ ಯಾವ

ಸಂಶಯವು ಬೇಡ ಎಂದು ಮಾನ್ಯ ದೇಶಪಾಂಡೆಯವರು ಕೂಡ ಹೇಳಿಕೆ ಕೊಟ್ಟಿದ್ದಾರೆ. ಇವತ್ತು ನಮ್ಮ ಪ್ರಶ್ನೆ ಏನೆಂದರೆ ದೆಹಲಿಯಿಂದ ಒಂದು ಹೇಳಿಕೆ ಬೆಂಗಳೂರಿಗೆ ಬಂದ ಮೇಲೆ ಇಲ್ಲಿ ಮಂತ್ರಿಗಳದ್ದು ಒಂದು ಹೇಳಿಕೆ ಇದರಿಂದ ಜನರಲ್ಲಿ ಒಂದು ರೀತಿಯ ಗೊಂದಲ ಉಂಟಾಗಿದೆ ನಿಜವಾಗಿಯೂ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ದೇವನಹಳ್ಳಿಯಲ್ಲಿ ಬರುತ್ತದೋ ಇಲ್ಲವೋ ಎಂಬ ಅನುಮಾನ ಜನರಲ್ಲಿ ಉಂಟಾಗಿದೆ. ಕೆಲವು ಜನರು ಹೇಳುತ್ತಾರೆ, ರಾಮನಗರದಲ್ಲಿ ಏರ್‌ಪೋರ್ಟ್ ಆಗಬೇಕೆಂದು ಪ್ರಪೋಸಲ್ ಕೊಟ್ಟಿದ್ದಾರೆಂದು ಇನ್ನೊಂದು ಕಡೆ ಮಾನ್ಯ ದೇಶಪಾಂಡೆಯವರು ಹೇಳುತ್ತಾರೆ, 4073 ಎಕರೆ ಜಮೀನು ಕ್ಲಿಯರ್ ಮಾಡಿದ್ದೇವೆ, ನೋಟಿಫಿಕೇಷನ್ ಕೂಡ ಜಾರಿಯಲ್ಲಿ ತಂದಿದ್ದೇವೆ. ಅಲ್ಲಿ ಏರ್‌ಪೋರ್ಟ್ ಆಗತಕ್ಕದ್ದನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ, ಎಂದು ಆದರೆ ಸಂಬಂಧಪಟ್ಟ ಮಂತ್ರಿಗಳು ಕೇಂದ್ರ ಸಚಿವರು ಹೇಳುತ್ತಾರೆ, ಅದು ಯಾವುದೂ ಕೂಡ ಇದುವರೆಗೆ ಫೈನಲೈಸ್ ಆಗಿಲ್ಲ. ನಾನು ಇದನ್ನು ಬಿ.ಒ.ಒ.ಟಿ. ಟರ್ಮ್ಸ್ ಮೇಲೆ ತೆಗೆದುಕೊಂಡು ಹೋಗುತ್ತೇವೆಂದು ಹೇಳುತ್ತಾರೆ. ಹೀಗಾಗಿ ಈ ಗೊಂದಲದಲ್ಲಿ ನಮಗೆ ಸಿಗತಕ್ಕ ಇಂಟರ್ ನ್ಯಾಷನಲ್ ಏರ್‌ಪೋರ್ಟ್‌ನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂಬ ಸಂಶಯ ನನಗೆ ಬಂದಿದೆ. ಇದುವರೆಗೆ ಕೆಲಸ ಪ್ರಾರಂಭ ಆಗಿಲ್ಲ. 3-4 ವರ್ಷಗಳಿಂದ ಪ್ರಯತ್ನ ಮಾಡಿ ಕೇಂದ್ರದಲ್ಲಿ ಇದಕ್ಕೆ ಮಾನ್ಯತೆ ಕೊಟ್ಟಿದ್ದಾರೆ. ಎಕ್ಸ್‌ಪರ್ಟ್ ಕಮಿಟಿಯವರು ರಿಪೋರ್ಟ್ ಕೊಟ್ಟು ಆ ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟ್ ಮೇಲೆ (ಸ್ವಾಮಿನಾಥನ್ ಕಮಿಟಿ) ತೀರ್ಮಾನ ತೆಗೆದುಕೊಂಡು ಕೇಂದ್ರ ಸಚಿವರೇ ಸ್ವತಃ ಬಂದು ಎನ್‌ವಿರಮೆಂಟ್ ಕ್ಲಿಯರ್‌ನ್ಸ್ ಬಗ್ಗೆ ಮಾತುಕತೆ ನಡೆಸಿ ಇಷ್ಟೇಲ್ಲಾ ಚರ್ಚೆ ಆದರೂ ಈ ಕಾಂಟ್ರವರ್ಸಿ ಏತಕ್ಕೆ? ಒಂದು ಸಾರಿ ರಾಮನಗರದಲ್ಲಿ, ಒಂದು ಸಾರಿ ದೇವನಹಳ್ಳಿಯಲ್ಲಿ ಮಾಡುತ್ತೇವೆಂದು ಹೇಳುವುದು ಏತಕ್ಕೆ? ಕೇಂದ್ರ ಸಚಿವರು ನಮ್ಮ ರಾಜ್ಯದವರು ಇರುವಾಗ ಈ ರೀತಿ ಹೇಳಿಕೆ ಕೊಡತಕ್ಕದ್ದು ಏತಕ್ಕೆ? ಈ ರೀತಿಯಾದರೆ ನಮಗೆ ಯಾರು ಏರ್‌ಪೋರ್ಟ್ ಕೊಡಬೇಕು? ನಮ್ಮಲ್ಲಿ ಸಣ್ಣ ಪುಟ್ಟ ಏರ್‌ಪೋರ್ಟ್‌ಗಳನ್ನು ಹಾಸನ, ಗುಲ್ಬರ್ಗ ಮತ್ತು ಶಿವಮೊಗ್ಗದಲ್ಲಿ ಮಾಡಬೇಕೆಂದು ಇದೆ. ಬೆಳಗಾಂ, ಹುಬ್ಬಳ್ಳಿ, ಬಿಜಾಪುರ ಜಿಲ್ಲೆಗಳಲ್ಲೂ ಕೂಡ ಖಾಸಗಿ ವ್ಯಕ್ತಿಗಳಿಗೆ ಇದನ್ನು ಮಾಡಿಸಬೇಕೆಂದು ಸರ್ಕಾರದ ನಿರ್ಧಾರ ಇದ್ದ ಮೇಲೆ ಇವತ್ತು ಏತಕ್ಕೆ ಈ ರೀತಿ ಭಿನ್ನಾಭಿಪ್ರಾಯಗಳು? ರಾಜ್ಯ ಸರ್ಕಾರ ಒಂದು ಹೇಳುವುದು, ಕೇಂದ್ರ ಸಚಿವರು ಒಂದು ಹೇಳುವುದು ಆಮೇಲೆ ಅವರಿಗೆ ಏನು ಅಧಿಕಾರಿ ಇದೆ ಎಂದು, ಇವರು ಅವರಿಗೆ ಹೇಳುವುದು, ಈ ರೀತಿ ಆದರೆ ನಮ್ಮ ಗತಿ ಏನು? ಇದರ ಬಗ್ಗೆ ತಮ್ಮ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ತಾವು ಇದ್ದೀರಿ ತಮ್ಮ ನಿಲುವನ್ನು ಹೇಳಬೇಕು. ತಾವು ಏರ್‌ಪೋರ್ಟ್‌ಗಳನ್ನು ಅಲ್ಲಿ ತರುತ್ತೀರೋ ಇಲ್ಲಿ ತರುತ್ತೀರೋ ಮತ್ತು ಅದಕ್ಕೆ ಯಾವ ರೀತಿ ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎಚ್.ಎನ್. ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬೆಂಗಳೂರಿನಲ್ಲಿ ಆಗುವ ಬಗ್ಗೆ ನನ್ನ ಸಹಮತ ಇದೆ. ಅದಕ್ಕೆ ನನ್ನ ವಿರೋಧ ಇಲ್ಲ ಆದರೆ ಮೊದಲು ಅದನ್ನು ಎಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿಕೊಳ್ಳಬೇಕು. ದೇವನ ಹಳ್ಳಿಯಲ್ಲಿ ಆಗುವುದಕ್ಕೆ ನನ್ನ ವಿರೋಧ ಇದೆ. ಏತಕ್ಕೆಂದರೆ ನಿಮ್ಮ ಸರ್ಕಾರದಲ್ಲಿ

ಶ್ರೀಮಾನ್ ಹೆಗಡೆಯವರ ಕಾಲದಲ್ಲಿ 250 ಮನೆಗಳನ್ನು ಅಲ್ಲಿ ಕಟ್ಟುವುದಕ್ಕೆ ಡಿ.ಬಿ.ಎಲ್.ಎಫ್. ಕಂಪನಿಗೆ ಅನುಮತಿ ಕೊಟ್ಟರಿ. ಆಮೇಲೆ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡತಕ್ಕ ತಿಪ್ಪಗೊಂಡನ ಹಳ್ಳಿ ಜಲಾಶಯಕ್ಕೆ ಬರತಕ್ಕ ನೀರನ್ನು ಪಲ್ಯೂಟ್ ಮಾಡುತ್ತಾರೆ ಎಂದು ಹೈಕೋರ್ಟ್ ತೀರ್ಮಾನವಾಗಿದೆ. ತರುವಾಯ ಅವರು ಸುಪ್ರಿಂ ಕೋರ್ಟ್‌ಗೆ ಅಫೀಲ್ ಹಾಕಿಕೊಂಡಿದ್ದಾರೆ ಅದು ಎನೇ ಇರಲಿ. ಇದೇ ರೀತಿ ಟೌನ್‌ಶಿಫ್ ಡೆವಲಪ್ ಆದರೆ ಒಂದೆರಡು ವರ್ಷಗಳಲ್ಲಿ ತಿಪ್ಪಗೊಂಡನಹಳ್ಳಿಯಲ್ಲಿ ಪಲ್ಯೂಷನ್ ಆಗುತ್ತದೆ ಎನ್ನುವ ಆಧಾರದ ಮೇಲೆ ಹೈ ಕೋರ್ಟಿಗೆ ಹೋಗಿದ್ದರು. ಅಲ್ಲಿ ಕೇಸ್ ಡಿಸ್‌ಮಿಸ್ ಆಯಿತು. ಆಮೇಲೆ ಸುಪ್ರಿಂ ಕೋರ್ಟಿಗೆ ಹೋದರು. ಸುಪ್ರಿಂ ಕೋರ್ಟ್‌ನವರು ಕೇಸ್ ಡಿಸ್‌ಪೋಸ್ ಮಾಡಿದ್ದಾರೆ. ಅವರು ಏನು ನಿರ್ದೇಶನ ಕೊಟ್ಟಿದ್ದಾರೆ ಅಂದರೆ ಎನವಿರನ್‌ಮೆಂಟ್ ಪ್ರಾಬ್ಲಂ ಇರಲಿ, ಷಲ್ಯೂಷನ್ ಪ್ರಾಬ್ಲಂ ಇರಲಿ ಅದನ್ನು ಷಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರ ಕೈಯಲ್ಲಿ ಏಕ್ಸಾಮಿನ್ ಮಾಡಿಸಿ ಅವರ ಅನುಮತಿ ಪಡೆದು ಮಾಡತಕ್ಕದ್ದು ಎಂದು ಹೇಳಿದ್ದಾರೆ. ನಾವು ಏನು ಹೇಳಿದೆವು ಅಂದರೆ ಖಾಸಗಿ ಜಮೀನನ್ನು ಬಿಡದ ಹತ್ತಿರ ಅಕ್ವೈರ್ ಮಾಡಿದರೆ ರಾಮನಗರ, ಕನಕಪುರ, ಮದ್ದೂರು, ಮಂಡ್ಯ ಇವೆಲ್ಲ ಸ್ಯಾಟ್‌ಲೈಟ್ ಟೌನ್‌ಗಳು ಆಗುತ್ತವೆ. ಅಲ್ಲಿ ಬೇಡ, ಅಲ್ಲಿ ಪ್ರಧಾನ ಮಂತ್ರಿಗಳ ಜಮೀನು ಇದೆ ಎಂದು ಹೇಳುವುದಾದರೆ ಸೋಲೂರು ಹತ್ತಿರ ಮಾಡಿ. ಯಾರ ಅನುಕೂಲಕ್ಕಾಗಿ ನೀವು ದೇವನಹಳ್ಳಿಯಲ್ಲಿ ಏರ್‌ಪೋರ್ಟ್ ಮಾಡುತ್ತೀರಿ? ಡೆವಲಪರ್ಸ್ ಬಂದು ಒತ್ತಾಯ ಮಾಡುತ್ತಾರೆಂದು ಮಾಡುತ್ತೀರಾ? ಏತಕ್ಕೆ ಈ ಹಠ ಎಂಬುದು ಗೊತ್ತಾಗುತ್ತಿಲ್ಲ. ನಾನು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬೇಡವೆಂದು ಹೇಳುತ್ತಿಲ್ಲ ಆದರೆ ಒಳ್ಳೆಯ ಸ್ಥಳದಲ್ಲಿ ಮಾಡಿ ಎಂದು ಹೇಳುತ್ತೇನೆ. ದೇವನ ಹಳ್ಳಿಯಲ್ಲೇ ಏತಕ್ಕೆ ಮಾಡಬೇಕು, ಬಿಡದಿಯಲ್ಲಿ ಮಾಡಿದರೆ ಏನಾಗುತ್ತದೆ. ಪಲ್ಯೂಷನ್ ಕಂಟ್ರೋಲ್ ಬೋರ್ಡ್-ನವರು, ನಾವು ಏನು ಪಾಯಿಂಟ್ಸ್ ಹೇಳುತ್ತಿದ್ದೇವೆ ಅದೇ ರೀತಿ ವರದಿ ಕೊಟ್ಟಿದ್ದಾರೆ. ಇದನ್ನು ಮುಚ್ಚಿ ಹಾಕಿದರೆ ನಾವು ಕೋರ್ಟಿಗೆ ಹೋಗುತ್ತೇವೆ. ಈ ಕೆಲಸ ಬೇಗ ಆಗಬೇಕೆಂದರೆ ಲೆಕ್ಕಚಾರ ಮಾಡಿ ಹೇಳಿ. Don't pollute drinking water of Bangaloreans don't pollute the water sources of Hoskote and other villages that is all my point.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮೊದಲನೆಯದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆಗುತ್ತದೋ ಇಲ್ಲವೋ ಎಂಬುದು ಒಂದು ಪ್ರಶ್ನೆ ಆಗುತ್ತದೆ ಎಂದು ಒಂದು ಕಡೆ ಹೇಎಳುತ್ತಿದ್ದಾರೆ ಮತ್ತೊಂದು ಕಡೆ ಇಲ್ಲವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಷರತ್ತುಗಳು ಏನು ಆ ಷರತ್ತುಗಳನ್ನು ಒಪ್ಪುವುದಿಲ್ಲವೆಂದು ಟಾಟಾ ಕಂಪನಿಯವರು ಹೇಳುತ್ತಿದ್ದಾರೆ. ಮಾತುಕತೆಯಾಗುವಾಗ ಕೇಂದ್ರದವರು ಷರತ್ತುಗಳನ್ನು ಹಾಕಿದ್ದಾರಾ? ವಿಮಾನ ನಿಲ್ದಾಣ ದೇವನ ಹಳ್ಳಿಯಲ್ಲಿ ಇರಬೇಕೇ ಅಥವಾ ಎಲ್ಲಿ ಇರಬೇಕು? ಇದರ ಹಿಂದೆ ಅನೇಕ ಶಕ್ತಿಗಳ ಕೈವಾಡ ಇದೆ. ಅಲ್ಲಿ ತೋಟಗಾರಿಕೆ ಇದೆ. ಅನೇಕ ಶಕ್ತಿಗಳು ಅಲ್ಲಿ ಸಾವಿರಾರು ಎಕರೆ ಜಮೀನನ್ನು ಖರೀದಿ ಮಾಡಿದ್ದಾರೆ. ಇವರೆಲ್ಲರನ್ನೂ ಉಳಿಸುವ ಚಿಂತನೆ ಇವರದು. ಈಗ ಭೂಮಿಯ ಬೆಲೆ ಅಲ್ಲಿ ವಿಪರೀತಕ್ಕೇರಿದೆ. 1 ಲಕ್ಷ, 10 ಲಕ್ಷ, 15 ಲಕ್ಷ ಹೀಗೆ ಕೋಟಿ ಕೋಟಿಯವರೆಗೆ ಹೋಗಿದೆ. ದೊಡ್ಡ ಅನ್ಯಾಯವೇ ಅಲ್ಲಿ ನಡೆಯುತ್ತಿದೆ. ಒಬ್ಬೊಬ್ಬ ವ್ಯಕ್ತಿಯೇ

ಸುಮಾರು ಎರಡು ಸಾವಿರ, ಮೂರು ಸಾವಿರ ಎಕರೆ ಭೂಮಿಯನ್ನು ಕೊಂಡುಕೊಂಡಿದ್ದಾರೆ. ಯಾರನ್ನು ಉಳಿಸುವುದಕ್ಕೆ ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ. ನಾನು ಇದರ ಬಗ್ಗೆ ತೀವ್ರವಾಗಿ ಹೋರಾಟ ಮಾಡುತ್ತೇನೆ. ನಿಮ್ಮ ನಿರ್ಧಾರದಿಂದ ಜನಗಳಿಗೆ ತೊಂದರೆಯಾಗುತ್ತಿದೆ. ಪರಿಸರದ ವಿಚಾರದಲ್ಲಿ ದೇವನಹಳ್ಳಿಯ ಸುತ್ತಮುತ್ತ ಮಾಲಿನ್ಯವಾಗುತ್ತದೆ. ತಿಪ್ಪಗೊಂಡನಹಳ್ಳಿಯಲ್ಲಿ ಜಲಮಾಲಿನ್ಯವಾಗುತ್ತದೆ. ನಿಮಗೆ ಜನರನ್ನು ಸಾಯಿಸಬೇಕು ಎನ್ನುವುದೇ ಆಗಿದ್ದರೆ ತಿಪ್ಪಗೊಂಡನಹಳ್ಳಿಗೇ ಒಂದು ಬಾಂಬ್ ಹಾಕಿ, ಹೆಸರುಘಟ್ಟಕ್ಕೆ ಒಂದು ಬಾಂಬ್ ಹಾಕಿ. ಮಾನ್ಯ ಅಧ್ಯಕ್ಷರೇ, ಏನೇ ಆಗಲೀ ನಾನು ಅದರ ಬಗ್ಗೆ ತೀವ್ರವಾಗಿ ಹೋರಾಟವನ್ನೇ ಮಾಡುತ್ತೇನೆ.

ಶ್ರೀ ಆರ್.ವಿ ದೇಶಪಾಂಡೆ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು, ಮಾನ್ಯ ನಂಜೇಗೌಡರು ಮತ್ತು ಮಾನ್ಯ ವಾಟಾಳ್‌ರವರು ಮಾತನಾಡುತ್ತ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ವಿಚಾರದಲ್ಲಿ ಅಥವಾ ಮಂತ್ರಿಗಳ ಸ್ಟೇಟ್‌ಮೆಂಟ್‌ನಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳು ಇವೆಯೆಂದು ಗಮನಕ್ಕೆ ತಂದಿದ್ದಾರೆ. ನಾನು ಈ ಸದನದ ಗಮನಕ್ಕೆ ಬಹಳ ವಿನಯದಿಂದ ಒಂದು ಮನವಿಯನ್ನು ಮಾಡುತ್ತೇನೆ. ರಾಜ್ಯ ಸರ್ಕಾರದ ಸ್ಟ್ಯಾಂಡ್‌ನಲ್ಲಿ ಮತ್ತು ಕ್ಲಾರಿಟಿಯಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಇಲ್ಲ. ಕಂಟಿನ್ಯೂಯಿಟಿಯಲ್ಲಿಯೂ ಸಹ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲ. ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಬೇಕೆನ್ನುವ ಐಡಿಯಾ ಶ್ರೀಮಾನ್ ಖರ್ಗೆಯವರು ಕೈಗಾರಿಕಾ ಸಚಿವರಾಗಿದ್ದಾಗಲೇ ಬಂದದ್ದು. ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ನಂಜೇಗೌಡರು ಮಾತನಾಡುತ್ತ ಅಲ್ಲಿ ಸಾವಿರಾರು ಎಕರೆ ಜಮೀನನ್ನು ಅನೇಕ ಶಕ್ತಿಗಳು ತೆಗೆದುಕೊಂಡಿದ್ದಾರೆ. ಅವರಿಗೆ ಸಹಾಯ ಮಾಡುವುದಕ್ಕೆ ಸರ್ಕಾರದವರು ಹೊರಟಿದ್ದಾರೆಂದರು. ಆದರೆ ಜಮೀನನ್ನು ಐಡೆಂಟಿಫೈ ಮಾಡಿದ್ದು ಅವರ ಸರ್ಕಾರವೇ ಹೊರತು ನಮ್ಮ ಸರ್ಕಾರವಲ್ಲ. ನಾವು ಅಧಿಕಾರಕ್ಕೆ ಬರುವ ಮುಂಚೆಯೇ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ಇದಕ್ಕಾಗಿ ಮಾಡಿ ಶ್ರೀ ರಾಮನಾಥರವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಆ ಕಮಿಟಿಯವರು ಹಲವಾರು ಕಡೆ ಸ್ಥಳ ವೀಕ್ಷಣೆ ಮಾಡಿ ಕೊನೆಗೆ 'ದೇವನಹಳ್ಳಿ' ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೂಕ್ತವಾದ ಸ್ಥಳವೆಂದು ಶಿಫಾರಸ್ಸನ್ನು ಮಾಡಿದರು. ಆ ಶಿಫಾರಸ್ಸನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕಳುಹಿಸಿತು. ಆಗ ದೇವನಹಳ್ಳಿಯಲ್ಲಿ ಏರ್‌ಪೋರ್ಟ್ ಮಾಡಿ ಎಂದು ಹೇಳಿದರು. ಆದುದರಿಂದ ಯಾರಿಗೂ ಸಹಾಯ ಮಾಡುವುದಕ್ಕೆ ಅದನ್ನು ಮಾಡಲಿಲ್ಲ. ನಮ್ಮ ಸರ್ಕಾರ ಬರುವುದಕ್ಕೆ ಮುಂಚೆಯೇ ಏರ್‌ಪೋರ್ಟ್ ಆಗಬೇಕೆಂದು ನಿರ್ಣಯವಾಗಿದೆ. ಇದಾದ ನಂತರ ಮಾನ್ಯ ನಂಜೇಗೌಡರು ಹೇಳಿದರು, ದೇವನಹಳ್ಳಿಯಲ್ಲಿ ಮಾಡಿದರೆ ಅಲ್ಲಿ ಪೊಲ್ಯೂಷನ್ ಆಗುತ್ತದೆಂದು ಬಿಡಿದಿಯಲ್ಲಿ ಪ್ರಧಾನಮಂತ್ರಿಗಳ ಜಾಗ ಇದೆಯೆಂದು ನಾನು ಯಾವತ್ತಿಗೂ ಹೇಳಲಿಲ್ಲ, ನನ್ನ ದೃಷ್ಟಿಯಲ್ಲಿ ತಿಳಿದುಕೊಂಡಿರುವ ಹಾಗೆ ಅಲ್ಲಿ ಪ್ರಧಾನಮಂತ್ರಿಗಳ ಜಾಗ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಇನ್ನು ಎರಡನೆಯದಾಗಿ ಪೊಲ್ಯೂಶನ್ ಬಗ್ಗೆ ಹೇಳಬೇಕೆಂದರೆ ಯಾವುದೇ ಕೈಗಾರಿಕೆ ಬಂದರೂ ಪೊಲ್ಯೂಶನ್ ಆಗುತ್ತದೆ. ಆದರೆ ಎಷ್ಟು ಪ್ರಮಾಣದಲ್ಲಿ ಆಗುತ್ತದೆ, ಇದರಿಂದ ಏನು ಲಾಭವಿದೆ, ಏನು ನಷ್ಟವಿದೆ, ಜನಗಳಿಗೆ ಇದರಿಂದ ಹೆಚ್ಚಿಗೆ ಅನಾನುಕೂಲವಾಗುತ್ತದೆಯೇ ಎಂಬ ಬಗ್ಗೆ ತೀರ್ಮವಾಗಿ ಸರ್ಕಾರ ಗಮನಕ್ಕೆ ತೆಗೆದುಕೊಳುತ್ತದೆ. ಇದರ ಬಗ್ಗೆ ಯಾವುದೇ ರೀತಿಯ

ಬಯ ಬೇಡ. ಇವತ್ತು ಸುಪ್ರಿಂ ಕೋರ್ಟ್‌ನಲ್ಲಿ ಏನು ಹೇಳಿದ್ದಾರೆಂದರೆ Subject to the clearance by the State pollution control Board and the Environment Clearance Board of the Central Government. ಆ ಪ್ರಕಾರ ಸರ್ಕಾರ ತನ್ನ ಎಲ್ಲಾ ಪ್ರಯತ್ನವನ್ನು ಮಾಡುತ್ತದೆ. ಆ ಬಗ್ಗೆ ಚಿಂತೆ ಮಾಡುವ ಅವಶ್ಯಕ ಇಲ್ಲ, ಭಯ ಬೀಳಬೇಕಾಗಿಲ್ಲ. ಮಾನ್ಯ ಅಧ್ಯಕ್ಷರೇ, ಈ ವಿಮಾನ ನಿಲ್ದಾಣದ ಸಂಬಂಧ ಗ್ಲೋಬಲ್ ಟ್ರೇಡರ್ಸ್‌ರವರು ಟೆಂಡರ್ ಕರೆದರು, ಆಗ ಹಲವಾರು ಪಾರ್ಟಿಸ್ ಅರ್ಜಿ ಹಾಕಿದರು. ಕೊನೆಗೆ 'ಟಾಟಾ' ರವರಿಗೆ ಕೊಟ್ಟಿದೆ. ಮಾನ್ಯ ಪ್ರಧಾನಮಂತ್ರಿಗಳು ಅಂದು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ Some time in December 1994, we cleared this project. There was an Official committee for this. ಅಫಿಶಿಯಲ್ ಕಮಿಟಿ ರೆಕಮೆಂಡೇಶನ್ ಬಂದಾಗ, its recommendations were accepted in to by the cabinet and later it was accepted by the TATA. ಅದರ ನಂತರ ಸಾಕಷ್ಟು ಪ್ರಗತಿಯಾಗಿದೆ. ನಾಲ್ಕು ಸಾವಿರ ಚಿಲ್ಲರೆ ಎಕರೆ ಲ್ಯಾಂಡ್ ತೆಗೆದುಕೊಳ್ಳುವುದಿತ್ತು. ಅದರಲ್ಲಿ 18 ನೂರು ಸರ್ಕಾರದ ಲ್ಯಾಂಡ್ ಇದೆ, ಇದಲ್ಲದೇ ಫಾರೆಸ್ಟ್ ಲ್ಯಾಂಡ್ ಇದೆ, ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಯಾವುದೇ ರೀತಿಯ ಮರಗಳು ಇಲ್ಲ. ರೆವಿನ್ಯೂ ಭೂಮಿಯನ್ನು ಟ್ರಾನ್ಸ್‌ಫರ್ ಮಾಡಲಾಗುತ್ತದೆ. ಅಲ್ಲಿಯ ರೈತರಿಗೆ ಯೋಗ್ಯವಾದ ಬೆಲೆಯನ್ನು ಅವರ ಜಮೀನಿಗೆ ಕೊಡಲು ಸರ್ಕಾರ ಪ್ರಯತ್ನ ಪಡುತ್ತಿದೆ. Tenders were floated on the basis of build, own, operate (B00) ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಇಲ್ಲಿಯ ತೊಂದರೆ ಬಗ್ಗೆ ಗೊತ್ತಿದೆ. The Government of India have asked the State Government as to whether the International Airport project will be done on the basis of Build, own, operate (B00) or Build, own, operate and transfer (BOOT). ಈಗ ಏನಾಗಿದೆಯೆಂದರೆ ಪ್ರಾಜೆಕ್ಟ್ ರಿಪೋರ್ಟ್ ನಮ್ಮ ಕ್ಯಾಬಿನೆಟ್‌ನಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕ್ಲಿಯರ್ ಮಾಡಿದ ನಂತರ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಏಕೆಂದರೆ. ಮೂರ್ನಾಲ್ಕು ವಿಷಯಗಳಲ್ಲಿ ಕೇಂದ್ರ ಸರ್ಕಾರದವರು ನಮಗೆ ಕ್ಲಾರಿಫಿಕೇಷನ್ ಕೇಳಿದ್ದಾರೆ. If the tender conditions are changed, then the transparency may go. We have informed the Centrel Government that in this project, the quality of services to be offered should be of international standard. The Central Government in their letter have asked us about controlling air traffic and we have told them that the required machineries and equipments will be installed by us and it is for them to control the air traffic. The present HAL Airport will be used for emergency landing and test flights will fly from the Internaational Airport to different countries. ಏರ್‌ಪೋರ್ಟ್ ಅಥಾರಿಟಿಯವರೇ ಡೆಪ್ಯೂಟೇಶನ್ ಮೇಲೆ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಲಿ ಮತ್ತು ಅವರೇ ಕಂಟ್ರೋಲ್ ಮಾಡಿಕೊಳ್ಳಲಿ ಎಂದು ಹೇಳಿದ್ದೇವೆ. ದೇವನಹಳ್ಳಿಯಲ್ಲಿ ಏರ್‌ಪೋರ್ಟ್ ಆಗುವ ವಿಚಾರದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಯಾವುದೇ ರೀತಿಯ ಕಾಂಟ್ರಾವರ್ಸಿ ಇಲ್ಲ ಆದುದರಿಂದ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ದೇವನಹಳ್ಳಿಯಲ್ಲಿಯೇ ಆಗುತ್ತದೆ. ಇದರಲ್ಲಿ ಯಾವುದೇ

ರೀತಿಯ ಸಂದೇಹ ಇಲ್ಲ. This is a very important and prestigeous porject for Karnataka, the economy of Karnataka and even the Southern States will grow from this. With the cooperation of Hon'ble prime Minister and the Union Minister for Civil Aviation we will get this project here.

SRI H.N. NANJEGOWDA: If environmental clearance, pollution Board clearance, it will go ahead but they have prejudged the issue. That means there is a wrong report. did they have a independent agency reporto say that Bangalore water is polluted or not.

SRI R.V. DESHPANDE: The project is cleared. for example, Telco we have cleared at Dharwar, Hassan. TVS we have cleared. Before clearance we say subject to the approval of the pollution Control Board. Even Government of India clearance it is subject to the clearance by the concerned Ecology and Environment Department. This is the procedure.

SRI MALLIKARJUNA KHARGE: In your Replay you have clearly stated that there was no question of shifting the proposed Internetional Airport from Devanahalli to any other place. The Technicl Committee as submitted its report and oven Ministry of civil Aviation has cleared the project. with all this clearance why this is being delayed?

ಇದು ಏಕೆ ತಡವಾಗುತ್ತಿದೆ? ಏಕೆ ಪಲ್ಯೂಷನ್ ಬೋರ್ಡ್‌ನಿಂದ ಕ್ಲಿಯರ್ ಆಗುತ್ತಿಲ್ಲ? ಪ್ರಧಾನಮಂತ್ರಿಗಳು ನಮ್ಮರಾಜ್ಯದವರೇ, ಸಿವಿಲ್ ಏವಿಯೇಷನ್ ಮಿನಿಸ್ಟರ್ ನಮ್ಮರಾಜ್ಯದವರೇ ಅವರಿಗೆ ಅಷ್ಟೇ ಆಸಕ್ತಿ ಇದೆಯೋ, ಇವರಿಗೆ ಅಷ್ಟೇ ಆಸಕ್ತಿ ಇದೆ. ಬೇರೆ ರಾಜ್ಯದವರು ಮುಖ್ಯಮಂತ್ರಿಗಳಾಗಿದ್ದರೆ ಆಸಕ್ತಿ ಇಲ್ಲವೆಂದು ಒಪ್ಪುತ್ತಿದ್ದೆವು. ಇಬ್ಬರೂ ಇಲ್ಲಿನವರೇ ಆಗಿ ಏಕೆ ಈ ಸಮಸ್ಯೆ ಉದ್ಭವವಾಗುತ್ತಿದೆ? ಇದರ ಬಗ್ಗೆ ಮಾತುಕತೆ ಆಡಿದ್ದಿರೋ ಇಲ್ಲವೋ? ಎಲ್ಲಿ ತಪ್ಪುತ್ತಿದೆ? ರತನ್ ಟಾಟಾ ಅವರನ್ನು ಏನಾದರೂ ಕರೆಯುತ್ತಿದ್ದಿರೋ ಹೇಗೆ?

ಅಧ್ಯಕ್ಷರು: ಮಾನ್ಯ ವಿರೋಧ ನಾಯಕರು ರತನ್ ಟಾಟಾ ಅವರನ್ನು ಕರೆಸುವ ಅಪೇಕ್ಷೆ ಇದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ: ರತನ್ ಟಾಟಾರವರನ್ನು ಪುನಃ ಕೈಗಾರಿಕೆ ಹಾಕುವುದಕ್ಕೆ ಕರೆಯುತ್ತೇವೆ.

MR. SPEAKAR: You seek his advice. He was a former Industries Minister.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಎಲ್ಲಾದರೂ ಮಾಡಿ. ಪ್ರಧಾನಮಂತ್ರಿಗಳು ಸಿವಿಲ್ ಏವಿಯೇಷನ್ ಮಿನಿಸ್ಟರ್ ಇಬ್ಬರೂ ಈ ರಾಜ್ಯದವರಾಗಿದ್ದು ಏಕೆ ಆಗುತ್ತಿಲ್ಲ? ಇದು ಏಕೆ ಪೋಸ್ಟ್ ಪೋನ್ ಆಗುತ್ತಿದೆ?

ಶ್ರೀ ಜೆ.ಹೆಚ್. ಪಟೇಲ್: ಈಗ ಅದನ್ನು ಮಾಡುವುದಕ್ಕೆ ಒಂದು ಕಂಪನಿಯವರು ಷರತ್ತಿನ ಮೇಲೆ ಒಪ್ಪಿಕೊಂಡಿದ್ದಾರೆ. ಏಕೆಂದರೆ ಅವರು ವ್ಯಾಪಾರ ಮಾಡುವವರು, ಅಂತರ ರಾಷ್ಟ್ರೀಯ ವಿಮಾನ ಹಾರಿಸುವವರು. ಅವರು ಲುಕ್ಸಾನು ಮಾಡಿಕೊಳ್ಳುವುದಕ್ಕೆ ತಯಾರಿರುವುದಿಲ್ಲ. ಅವರು ನಮ್ಮ ರಾಜ್ಯದ ಮೇಲೆ ಕರುಣೆ ಇಟ್ಟು ಬರುವುದಿಲ್ಲ. ಅವರು ಏಕಾನಾಮಿಕಲ್ ನಯಲ್ ಇದೆಯೇ ಎಂದು ಯೋಜನೆ ಮಾಡುತ್ತಾರೆ, ಅದಕ್ಕೆ ಟೈಂ ಆಗದಿದೆ. ಈಗ ತಾವು ಏನು ಹೇಳಿದ್ದೀರಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಮ್ಮದೇ ಎಂದು. ನಮ್ಮದಾಗುವ ಹೊತ್ತಿಗೆ ಅದು ಕ್ಲಿಯರಾಗುತ್ತಿದೆ. ಇಲ್ಲದಿದ್ದರೆ ಕ್ಲಿಯರ್ ಆಗುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಮುಂಜಾನೆ ಒಬ್ಬರು ಒಂದು ಸ್ಟೇಟ್‌ಮೆಂಟ್ ಕೊಡಿ. ಸಂಜೆ ಒಬ್ಬರು ಒಂದು ಸ್ಟೇಟ್‌ಮೆಂಟ್ ಕೊಡಿ. ಸೆಟ್ಲ್ ಆಗುತ್ತದೆ. ಏನು ಮಾತನಾಡುತ್ತೀರಿ?

ಶ್ರೀ ಜೆ. ಹೆಚ್. ಪಟೇಲ್: ಈಗ ಏರ್‌ಪೋರ್ಟ್ ಆಗಬೇಕೋ ಬೇಡವೋ ಹೇಳಿ ಆಗಬೇಕು ತಾನೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮಗೆ ಆಗಬೇಕಾಗಿದೆ ಅದನ್ನು ಮೊದಲು ಹೇಳಿ.

ಶ್ರೀ ಜೆ.ಹೆಚ್. ಪಟೇಲ್: ಅದನ್ನು ಮಾಡುತ್ತೇವೆ ಬಿಡಿ.

ಅಧ್ಯಕ್ಷರು: ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ನಿವೇದನೆ. ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಸರ್ಕಾರದ ಅನುದಾನ ಪಡೆದಂತಹ ಕೆಲವರು ಶಿಕ್ಷಕಿಯರು ಹಾಗೂ ಆಯಾಗಳು ಇದ್ದಾರೆ. ಅವರೆಲ್ಲಾ ಒಟ್ಟು 500 ಜನಗಳ ಒಳಗೆ ಆಗುತ್ತಾರೆ. ಅವರಿಗೆ ಅರ್ಧ ಸಂಬಳ ಕೊಡುತ್ತಿದ್ದಾರೆ. ಬೆಳಿಗ್ಗೆ ಅವರ ನಿಯೋಗ ನನ್ನಲ್ಲಿ ಬಂದಿತ್ತು. ನಾನು ವಿಚಾರಿಸಿದೆ. ಅದರಲ್ಲೆ ಕೆಲವರು ಸತ್ತುಹೋಗಿದ್ದಾರೆ. ಕೆಲವರು ನಿವೃತ್ತಿಯಾಗಿದ್ದಾರೆ. ಅವರಿಗೆ ನಿವೃತ್ತಿ ವೇತನ ಕೊಡುತ್ತಿಲ್ಲ. ಪೂರ್ಣ ಸಂಬಳವನ್ನು ಕೊಡುತ್ತಿಲ್ಲ. ಅದಕ್ಕೆ ಒಂದು ಮನವಿ ಸಲ್ಲಿಸಿದ್ದಾರೆ. ಫೈನಾನ್ಸಿಯಲ್ ಇಂಪ್ಲಿಕೇಷನ್ ಆಗುತ್ತದೆಂದು. 1984ರಿಂದ ರಿಕ್ರೂಟ್‌ಮೆಂಟ್ ಆಗಿಲ್ಲ. ಆದುದರಿಂದ ಅವರ ಸಂಖ್ಯೆ ಕಡಿಮೆ ಇದೆ. ಆದುದರಿಂದ ಅವರಿಗೇನು ಅರ್ಧ ಸಂಬಳ ಕೊಡುತ್ತಿದ್ದಾರೆ, ಅದನ್ನು ಪೂರ್ಣ ಸಂಬಳ ಹಾಗೂ ಪೆನ್‌ಷನ್ ಬೆನಿಫಿಟ್ ಕೊಡಬೇಕು.

ಈ ಹಂತದಲ್ಲಿ ಉಪಾಧ್ಯಕ್ಷರು (ಮಾನ್ಯ ಚಂದ್ರಶೇಖರ್ ಸಿ. ಮಾಮನಿಯರು) ಅಧ್ಯಕ್ಷ ಪೀಠವನ್ನಲಂಕರಿಸಿದರು